# ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
# ಮತ್ತು
# ಕರ್ನಾಟಕ ರಾಜ್ಯ ವಿಜ್ಞಾನ ಹಾಗೂ ತಂತ್ರಜ್ಞಾನ ಮಂಡಳಿ

## ಪತ್ರಿಕಾ ಪ್ರಕಟಣೆ

### ಸರ್. ಎಂ. ವಿಶ್ವೇಶ್ವರಯ್ಯ, ಡಾ. ರಾಜಾರಾಮಣ್ಣ, ಸರ್. ಸಿ.ವಿ ರಾಮನ್, ಪ್ರೊ. ಸತೀಶ್ ಧವನ್ ಮತ್ತು ಡಾ. ಕಲ್ಪನಾ ಚಾವ್ಲಾ ಇವರುಗಳ ಸ್ಮರಣಾರ್ಥ ವಿಜ್ಞಾನಿ ಮತ್ತು ಇಂಜಿನಿಯರ್ ರಾಜ್ಯ ಪ್ರಶಸ್ತಿ – 2020 ಮತ್ತು 2021ರ ವಿತರಣಾ ಸಮಾರಂಭ

ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ರಾಜ್ಯದ ವಿಜ್ಞಾನಿ ಮತ್ತು ಇಂಜಿನಿಯರ್‌ಗಳನ್ನು ಪ್ರೋತ್ಸಾಹಿಸಲು ಪ್ರಖ್ಯಾತ ವಿಜ್ಞಾನಿಗಳಾದ ಸರ್. ಎಂ ವಿಶ್ವೇಶ್ವರಯ್ಯ, ಡಾ. ರಾಜರಾಮಣ್ಣ, ಸರ್. ಸಿ.ವಿ. ರಾಮನ್, ಪ್ರೊ. ಸತೀಶ್‌ಧವನ್ ಮತ್ತು ಡಾ. ಕಲ್ಪನಾ ಚಾವ್ಲಾ ಇವರುಗಳ ಹೆಸರಿನಲ್ಲಿ ಪ್ರತಿ ವರ್ಷ ರಾಜ್ಯ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಿದೆ.

ಸರ್ಕಾರವು ಈ ಪ್ರಶಸ್ತಿಗಳಿಗೆ ಅರ್ಹ ವಿಜ್ಞಾನಿ ಮತ್ತು ಇಂಜಿನಿಯರುಗಳ ಆಯ್ಕೆಗಾಗಿ ಹೆಸರಾಂತ ವಿಜ್ಞಾನಿಗಳನ್ನೊಳಗೊಂಡ ಉನ್ನತ ಮಟ್ಟದ ಆಯ್ಕೆ ಸಮಿತಿಯನ್ನು ರಚಿಸಿದ್ದು, **ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು (KSCST)** ಪ್ರಶಸ್ತಿಗೆ ಅರ್ಹ ಅಭ್ಯರ್ಥಿಗಳ ಆಯ್ಕೆ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭದ ನಿರ್ವಹಣಾ ಜವಾಬ್ದಾರಿಯನ್ನು ವಹಿಸಿಕೊಂಡಿದೆ.

**ಸರ್. ಎಂ. ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ರಾಜ್ಯ ಪ್ರಶಸ್ತಿ**: ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯದ ಅಭಿವೃದ್ಧಿಗಾಗಿ ತಮ್ಮ ಜೀವನಾವಧಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಇಬ್ಬರು ಹಿರಿಯ ವಿಜ್ಞಾನಿ/ಇಂಜಿನಿಯರ್‌ಗಳಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸುವುದು. ಈ ಪ್ರಶಸ್ತಿಯು ರೂ. 2,00,000/- ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

**ಡಾ. ರಾಜಾರಾಮಣ್ಣ ವಿಜ್ಞಾನಿ ರಾಜ್ಯ ಪ್ರಶಸ್ತಿ**: ರಾಜ್ಯದಲ್ಲಿ ವಿಜ್ಞಾನ ಶಿಕ್ಷಣ / ವಿಜ್ಞಾನದ ಇತಿಹಾಸ ಮತ್ತು ತತ್ವಜ್ಞಾನ / ವಿಜ್ಞಾನ ಮತ್ತು ಸಮಾಜ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಇಬ್ಬರು ಹಿರಿಯ ವಿಜ್ಞಾನಿ / ಇಂಜಿನಿಯರ್‌ಗಳಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸುವುದು. ಈ ಪ್ರಶಸ್ತಿಯು ರೂ. 1,50,000/- ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ.

**ಸರ್. ಸಿ.ವಿ. ರಾಮನ್ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ**: ಈ ಪ್ರಶಸ್ತಿಗಳನ್ನು ರಾಜ್ಯದ ಯುವ ವಿಜ್ಞಾನಿಗಳನ್ನು ಪ್ರೋತ್ಸಾಹಿಸಲು, ಅವರ ವಿಶಿಷ್ಟ ಕಾರ್ಯಸಾಧನೆಯನ್ನು ಪರಿಗಣಿಸಿ, ಈ ಕೆಳಕಂಡ ಐದು ಕ್ಷೇತ್ರಗಳಲ್ಲಿ ಪ್ರತಿವರ್ಷ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.

- ಭೌತ ವಿಜ್ಞಾನ ಮತ್ತು ಗಣಿತಶಾಸ್ತ್ರ
- ರಾಸಾಯನ ವಿಜ್ಞಾನ
- ಜೀವ ವಿಜ್ಞಾನ
- ವೈದ್ಯಕೀಯ ವಿಜ್ಞಾನ
- ಕೃಷಿ ವಿಜ್ಞಾನ ಮತ್ತು ಪಶುಸಂಗೋಪನೆ

**ಪ್ರೊ. ಸತೀಶ್‌ಧವನ್ ಯುವ ಇಂಜಿನಿಯರ್ ರಾಜ್ಯ ಪ್ರಶಸ್ತಿ**: ಈ ಪ್ರಶಸ್ತಿಗಳನ್ನು ರಾಜ್ಯದ ಯುವ ಇಂಜಿನಿಯರುಗಳನ್ನು ಪ್ರೋತ್ಸಾಹಿಸಲು ಅವರ ವಿಶಿಷ್ಟ ಕಾರ್ಯಸಾಧನೆಯನ್ನು ಪರಿಗಣಿಸಿ, ಇಂಜಿನಿಯರಿಂಗ್ ವಿಜ್ಞಾನ ಕ್ಷೇತ್ರಗಳಲ್ಲಿ ಪ್ರತಿವರ್ಷ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.

**ಡಾ. ಕಲ್ಪನಾ ಚಾವ್ಲಾ ಮಹಿಳಾ ಯುವ ವಿಜ್ಞಾನಿ ಪ್ರಶಸ್ತಿ**: ಈ ಪ್ರಶಸ್ತಿಗೆ ರಾಜ್ಯದ ಯುವ ಮಹಿಳಾ ವಿಜ್ಞಾನಿ / ಇಂಜಿನಿಯರ್‌ಗಳನ್ನು ಪ್ರೋತ್ಸಾಹಿಸಲು ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಅವರ ವಿಶಿಷ್ಟ ಕಾರ್ಯಸಾಧನೆಯನ್ನು ಪರಿಗಣಿಸಿ, ಪ್ರತಿವರ್ಷ ಒಬ್ಬ ಮಹಿಳಾ ಯುವ ವಿಜ್ಞಾನಿ / ಇಂಜಿನಿಯರ್‌ಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ.

ಸರ್. ಸಿ.ವಿ. ರಾಮನ್, ಪ್ರೊ. ಸತೀಶ್‌ಧವನ್ ಮತ್ತು ಡಾ. ಕಲ್ಪನಾ ಚಾವ್ಲಾ ಪ್ರಶಸ್ತಿಗಳು ರೂ.1,00,000/- ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತವೆ.

2020 ಮತ್ತು 2021ನೇ ಸಾಲಿನ ಪ್ರಶಸ್ತಿಗಳಿಗಾಗಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು ಏಪ್ರಿಲ್ 2022 ರಂದು ನಾಮಪತ್ರಗಳನ್ನು ಆಹ್ವಾನಿಸಿದ್ದು ಒಟ್ಟು 330 ವಿಜ್ಞಾನಿ ಮತ್ತು ಇಂಜಿನಿಯರ್ ಗಳು ನಾಮಪತ್ರಗಳನ್ನು ಸಲ್ಲಿಸಿರುತ್ತಾರೆ. ಡಾ. ಎ.ಎಸ್. ಕಿರಣ್ ಕುಮಾರ್, ವಿಶ್ರಾಂತ ಅಧ್ಯಕ್ಷರು, ಇಸ್ರೋ ಇವರ ಅಧ್ಯಕ್ಷತೆಯಲ್ಲಿ ಸರ್ಕಾರವು ರಚಿಸಿದ ಆಯ್ಕೆ ಸಮಿತಿಯು 28 ವಿಜ್ಞಾನಿ ಮತ್ತು ಇಂಜಿನಿಯರ್ ಗಳನ್ನು ಈ ರಾಜ್ಯ ಪ್ರಶಸ್ತಿಗಳಿಗಾಗಿ ಆಯ್ಕೆಮಾಡಲಾಗಿದೆ.

2020 ಮತ್ತು 2021ನೇ ವರ್ಷದ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ದಿನಾಂಕ 23ನೇ ಮಾರ್ಚ್ 2023, ಗುರುವಾರ ಸಂಜೆ 4.00 ಗಂಟೆಗೆ **ಜೆ. ಎನ್. ಟಾಟಾ ಸಭಾಂಗಣ, ಭಾರತೀಯ ವಿಜ್ಞಾನ ಸಂಸ್ಥೆ ಆವರಣ**ದಲ್ಲಿ ಆಯೋಜಿಸಲಾಗಿದೆ. ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ. ಬಸವರಾಜ ಬೊಮ್ಮಾಯಿ ಅವರು ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ

ಭಾರತ ರತ್ನ ಪ್ರೊ. ಸಿ.ಎನ್.ಆರ್. ರಾವ್ FRS, ಲಿನಸ್ ಪೌಲಿಂಗ್ ರಿಸರ್ಚ್ ಸಂಶೋಧನಾ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ವಿಜ್ಞಾನ ಮತ್ತು ದಾರ್ಶನಿಕ ಸಮೂಹ, ಕರ್ನಾಟಕ ಸರ್ಕಾರ, ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಾರೆ. ಡಾ॥ ಸಿ. ಎನ್. ಅಶ್ವಥ್ ನಾರಾಯಣರವರು, ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು, ಕರ್ನಾಟಕ ಸರ್ಕಾರ ಅವರು ಅಧ್ಯಕ್ಷತೆ ವಹಿಸಿರುತ್ತಾರೆ. ಗೋವಿಂದನ್ ರಂಗರಾಜನ್, ನಿರ್ದೇಶಕರು, ಭಾರತೀಯ ವಿಜ್ಞಾನ ಸಂಸ್ಥೆ, ಹಾಗೂ ಶ್ರೀ ಎ. ಎಸ್. ಕಿರಣ್ ಕುಮಾರ್, ವಿಶ್ರಾಂತ ಅಧ್ಯಕ್ಷರು, ಇಸ್ರೋ ಇವರು ಗೌರವ ಅತಿಥಿಗಳಾಗಿದ್ದು ಹಾಗೂ ಪ್ರೊ. ಅಶೋಕ್ ಎಂ, ರಾಯಚೂರ್, ಕಾರ್ಯದರ್ಶಿ, ಕೆ.ಎಸ್.ಸಿ.ಎಸ್.ಟಿ ರವರು ಉಪಸ್ಥಿತರಿರುತ್ತಾರೆ.

## 2020 ಮತ್ತು 2021ನೇ ವರ್ಷದ ವಿಜ್ಞಾನಿ ಮತ್ತು ಇಂಜಿನಿಯರ್ ರಾಜ್ಯ ಪ್ರಶಸ್ತಿ ಪುರಸ್ಕೃತರ ಪಟ್ಟಿ

### ಸರ್. ಎಂ. ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ಪ್ರಶಸ್ತಿ – 2020

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಪ್ರೊ. ಎಸ್ ಆರ್. ನಿರಂಜನ**<br>ಮಾಜಿ ಉಪ ಕುಲಪತಿ, ಗುಲಬರ್ಗ ವಿಶ್ವವಿದ್ಯಾಲಯ<br>ಗೌರವಾನ್ವಿತ ಪ್ರಾಧ್ಯಾಪಕರು (ಜೀವಮಾನದವರೆಗೆ)<br>UGC-BSR ಫ್ಯಾಕಲ್ಟಿ ಫೆಲೋ, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾಲಯ,<br>ಮಾನಸಗಂಗೋತ್ರಿ, ಮೈಸೂರು – 570 006 | ವಿಜ್ಞಾನ ಮತ್ತು ತಂತ್ರಜ್ಞಾನ |  |
| **ಪ್ರೊ. ಟಿ. ಜಿ. ಸೀತಾರಾಮ್**<br>ಅಧ್ಯಕ್ಷರು, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (AICTE), ಭಾರತ ಸರ್ಕಾರ<br>ನೆಲ್ಸನ್ ಮಂಡೇಲಾ ಮಾರ್ಗ್, ವಸಂತ್ ಕುಂಜ್<br>ನವ ದೆಹಲಿ – 110 070 | ವಿಜ್ಞಾನ ಮತ್ತು ತಂತ್ರಜ್ಞಾನ |  |

### ಡಾ. ರಾಜಾ ರಾಮಣ್ಣ ವಿಜ್ಞಾನಿ ರಾಜ್ಯ ಪ್ರಶಸ್ತಿ – 2020

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಪ್ರೊ. ಬಾಲಾಜಿ ನಾರಾಯಣಸ್ವಾಮಿ ಕಿತಿಗನಹಳ್ಳಿ**<br>ಪ್ರಾಧ್ಯಾಪಕರು<br>ಮೈಕ್ರೋಬಯಾಲಜಿ ಮತ್ತು ಸೆಲ್ ಬಯಾಲಜಿ ವಿಭಾಗ<br>ಭಾರತೀಯ ವಿಜ್ಞಾನ ಸಂಸ್ಥೆ,<br>ಬೆಂಗಳೂರು | ವಿಜ್ಞಾನ ಶಿಕ್ಷಣ |  |
| **ಡಾ. ತೇಜರಾಜ್ ಎಂ. ಅಮೀನಭಾವಿ**<br>ಸಂಶೋಧನಾ ನಿರ್ದೇಶಕರು<br>ಸ್ಕೂಲ್ ಆಫ್ ಅಡ್ವಾನ್ಸ್ಡ್ ಸೈನ್ಸ್<br>KLE ತಾಂತ್ರಿಕ ವಿಶ್ವವಿದ್ಯಾಲಯ<br>ವಿದ್ಯಾನಗರ, ಹುಬ್ಬಳ್ಳಿ 580 031 | ವಿಜ್ಞಾನ ಶಿಕ್ಷಣ |  |

## ಸರ್ ಸಿ.ವಿ. ರಾಮನ್ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ- 2020

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಪ್ರೊ. ಬಿ. ಜೆ. ಗಿರೀಶ**<br>ಪ್ರಾಧ್ಯಾಪಕರು<br>ಗಣಿತಶಾಸ್ತ್ರ, ಅಧ್ಯಯನ ಮತ್ತು ಸಂಶೋಧನಾ ವಿಭಾಗ<br>ಕುವೆಂಪು ವಿಶ್ವವಿದ್ಯಾಲಯ<br>ಜ್ಞಾನಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ – 577451 | ಭೌತಿಕ ವಿಜ್ಞಾನ |  |
| **ಡಾ. ಎ. ವಿ. ರಘು**<br>ಪ್ರಾಧ್ಯಾಪಕರು<br>ಅಲೈಡ್ ಹೆಲ್ತ್ ಸೈನ್ಸಸ್<br>ಬಿಎಲ್‌ಡಿಇ ವಿಶ್ವವಿದ್ಯಾಲಯ (ಪರಿಗಣಿಸಲಾದ)<br>ವಿಜಯಪುರ – 586 103 | ರಾಸಾಯನಿಕ ವಿಜ್ಞಾನ |  |
| **ಡಾ. ನವೀನ್ ಕುಮಾರ್ ಸಿ.**<br>ಪ್ರಾಧ್ಯಾಪಕರು<br>ಮನೋವೈದ್ಯಶಾಸ್ತ್ರ ವಿಭಾಗ<br>ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (NIMHANS),<br>ಹೊಸೂರು ರಸ್ತೆ, ಬೆಂಗಳೂರು – 560 029 | ವೈದ್ಯಕೀಯ ವಿಜ್ಞಾನ |  |
| **ಡಾ. ಗಿರೀಶ್ ಕೆ. ಎಸ್.**<br>ಬಯೋಕೆಮಿಸ್ಟ್ರಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ<br>ತುಮಕೂರು ವಿಶ್ವವಿದ್ಯಾಲಯ,<br>ಬಿಎಚ್ ರಸ್ತೆ, ತುಮಕೂರು – 572 103 | ಜೀವ ವಿಜ್ಞಾನ |  |
| **ಪ್ರೊ. ಎಸ್ ಚಂದ್ರ ನಾಯಕ**<br>ಪ್ರಾಧ್ಯಾಪಕರು - (ICAR-AICRP)<br>ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ<br>ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ,<br>ಮೈಸೂರು – 570 006 | ಕೃಷಿ ವಿಜ್ಞಾನ ಮತ್ತು ಪಶು ಸಂಗೋಪನೆ |  |

## ಪ್ರೊ. ಸತೀಶ್ ಧವನ್ ಯುವ ಇಂಜಿನಿಯರ್ ರಾಜ್ಯ ಪ್ರಶಸ್ತಿ- 2020

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಡಾ. ಮೃತ್ಯುಂಜಯ ದೊಡ್ಡಮನಿ**<br>ಸಹ ಪ್ರಾಧ್ಯಾಪಕರು<br>ಸ್ಕೂಲ್ ಆಫ್ ಮೆಕ್ಯಾನಿಕಲ್ ಮತ್ತು ಮೆಟೀರಿಯಲ್ಸ್ ಇಂಜಿನಿಯರಿಂಗ್<br>ಐಐಟಿ–ಮಂಡಿ, ಕತೌಲ ಕಮಂಡ್ ಹತ್ತಿರ<br>ಹಿಮಾಚಲ ಪ್ರದೇಶ – 175 005 | ಇಂಜಿನಿಯರಿಂಗ್ ಸೈನ್ಸಸ್ |  |
| **ಪ್ರೊ. ರವೀಂದ್ರ ಎಸ್. ಹೆಗಡಿ**<br>ಅಸೋಸಿಯೇಟ್ ಪ್ರೊಫೆಸರ್ ಮತ್ತು ಡೀನ್<br>ಕಂಪ್ಯೂಟರ್ ಸೈನ್ಸಸ್ ವಿಭಾಗ<br>ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ,<br>ಕಡಗಂಚಿ, ಕಲಬುರ್ಗಿ. | ಇಂಜಿನಿಯರಿಂಗ್ ಸೈನ್ಸಸ್ |  |
| **ಪ್ರೊ. ರಾಘವೇಂದ್ರ ಯು.**<br>ಅಸೋಸಿಯೇಟ್ ಪ್ರೊಫೆಸರ್,<br>ಇನ್‌ಸ್ಟ್ರುಮೆಂಟೇಶನ್ ಮತ್ತು ಕಂಟ್ರೋಲ್ ಇಂಜಿನಿಯರಿಂಗ್ ವಿಭಾಗ,<br>ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ,<br>ಮಣಿಪಾಲ - 576104 | ಇಂಜಿನಿಯರಿಂಗ್ ಸೈನ್ಸಸ್ |  |
| **ಪ್ರೊ. ಆರ್.ವಿ ರವಿಕೃಷ್ಣ**<br>ಪ್ರಾಧ್ಯಾಪಕರು,<br>ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ,<br>ಭಾರತೀಯ ವಿಜ್ಞಾನ ಸಂಸ್ಥೆ,<br>ಬೆಂಗಳೂರು - 560012 | ಇಂಜಿನಿಯರಿಂಗ್ ಸೈನ್ಸಸ್ |  |

## ಡಾ. ಕಲ್ಪನಾ ಚಾವ್ಲಾ ಮಹಿಳಾ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ- 2020

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಪ್ರೊ. ಆರ್.ಗೀತಾ ಬಾಲಕೃಷ್ಣ**<br>ಪ್ರಾಧ್ಯಾಪಕರು ಮತ್ತು ನಿರ್ದೇಶಕರು,<br>ನ್ಯಾನೋ ಮತ್ತು ಮೆಟೀರಿಯಲ್ ಸೈನ್ಸಸ್ ಕೇಂದ್ರ,<br>ಜೈನ್ ವಿಶ್ವವಿದ್ಯಾಲಯ, ಜಕ್ಕಸಂದ್ರ ಪೋಸ್ಟ್,<br>ಕನಕಪುರ ತಾಲ್ಲೂಕು,<br>ಬೆಂಗಳೂರು - 562112 | ವಿಜ್ಞಾನ ಮತ್ತು ತಂತ್ರಜ್ಞಾನ |  |

## ಸರ್. ಎಂ. ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ಪ್ರಶಸ್ತಿ - 2021

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಪ್ರೊ. ತಪಸ್ ಕುಮಾರ್ ಕುಂದು**<br>ಪ್ರತಿಲೇಖನ ಮತ್ತು ರೋಗ ಪ್ರಯೋಗಾಲಯ,<br>ಆಣ್ವಿಕ ಮತ್ತು ಜೆನೆಟಿಕ್ಸ್ ಘಟಕ<br>ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್<br>ಸೈಂಟಿಫಿಕ್ ರಿಸರ್ಚ್ (JNCASR),<br>ಜಕ್ಕೂರು, ಬೆಂಗಳೂರು - 560064 | ವಿಜ್ಞಾನ ಮತ್ತು ತಂತ್ರಜ್ಞಾನ |  |
| **ಪ್ರೊ.ಉಪಿಂದರ್ ಸಿಂಗ್ ಭಲ್ಲಾ**<br>ಹಿರಿಯ ಪ್ರಾಧ್ಯಾಪಕ, NCBS,<br>ಜಿಕೆವಿಕೆ ಕ್ಯಾಂಪಸ್,<br>ಬಳ್ಳಾರಿ ರಸ್ತೆ,<br>ಬೆಂಗಳೂರು 560065 | ವಿಜ್ಞಾನ ಮತ್ತು ತಂತ್ರಜ್ಞಾನ |  |

## ಡಾ. ರಾಜಾ ರಾಮಣ್ಣ ವಿಜ್ಞಾನಿ ರಾಜ್ಯ ಪ್ರಶಸ್ತಿ - 2021

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಪ್ರೊ. ಎಸ್. ನಟರಾಜನ್**<br>ಪ್ರಾಧ್ಯಾಪಕರು<br>ಸಾಲಿಡ್ ಸ್ಟೇಟ್ ಮತ್ತು ಸ್ಟ್ರಕ್ಚರಲ್ ಕೆಮಿಸ್ಟ್ರಿ ಯುನಿಟ್<br>ಭಾರತೀಯ ವಿಜ್ಞಾನ ಸಂಸ್ಥೆ<br>ಬೆಂಗಳೂರು – 560 012 | ವಿಜ್ಞಾನ ಶಿಕ್ಷಣ |  |
| **ಡಾ. ರವಿಶಂಕರ್ ರೈ ವಿ**<br>UGC BSR ಫ್ಯಾಕಲ್ಟಿ ಫೆಲೋ<br>ಮೈಕ್ರೋಬಯಾಲಜಿ ಅಧ್ಯಯನ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ<br>ಮಾನಸಗಂಗೋತ್ರಿ, ಮೈಸೂರು - 570 006 | ವಿಜ್ಞಾನ ಶಿಕ್ಷಣ |  |

# ಸರ್ ಸಿ.ವಿ. ರಾಮನ್ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ - 2021

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಪ್ರೊ. ಎಚ್ ಸಿ ಮಂಜುನಾಥ**<br>ಅಸೋಸಿಯೇಟ್ ಪ್ರೊಫೆಸರ್, ಭೌತಶಾಸ್ತ್ರ,<br>ಮಹಿಳಾ ಸರ್ಕಾರಿ ಕಾಲೇಜು<br>ಕೋಲಾರಮ್ಮ ದೇವಸ್ಥಾನದ ಎದುರು,<br>ಕೋಲಾರ, ಕರ್ನಾಟಕ- 563101 | ಭೌತಿಕ ವಿಜ್ಞಾನ |  |
| **ಪ್ರೊ. ನಾಗರಾಜ್ ಪಿ. ಶೆಟ್ಟಿ**<br>ಅಸೋಸಿಯೇಟ್ ಪ್ರೊಫೆಸರ್,<br>ಸ್ಕೂಲ್ ಆಫ್ ಅಡ್ವಾನ್ಸ್ಡ್ ಸೈನ್ಸಸ್,<br>KLE ತಾಂತ್ರಿಕ ವಿಶ್ವವಿದ್ಯಾಲಯ,<br>ಹುಬ್ಬಳ್ಳಿ - 580 031. | ರಾಸಾಯನಿಕ ವಿಜ್ಞಾನ |  |
| **ಪ್ರೊ. ಪ್ರಸನ್ನ ಕೆ. ಸಂತೆಕಡೂರು**<br>ಅಸೋಸಿಯೇಟ್ ಪ್ರೊಫೆಸರ್,<br>CEMR ಪ್ರಯೋಗಾಲಯ, ಬಯೋಕೆಮಿಸ್ಟ್ರಿ ವಿಭಾಗ,<br>JSS ವೈದ್ಯಕೀಯ ಕಾಲೇಜು,<br>JSS ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್, ಶ್ರೀ ಶಿವರಾತ್ರೀಶ್ವರ ನಗರ, ಬನ್ನಿಮಂಟಪ,<br>ಮೈಸೂರು - 570015. | ವೈದ್ಯಕೀಯ ವಿಜ್ಞಾನಗಳು |  |
| **ಪ್ರೊ. ಶ್ರೀನಿವಾಸ್ ಮುತಾಲಿಕ್**<br>ಪ್ರಾಧ್ಯಾಪಕ ಮತ್ತು ಮುಖ್ಯಸ್ಥ,<br>ಫಾರ್ಮಾಸ್ಯೂಟಿಕ್ಸ್ ವಿಭಾಗ<br>ಮಣಿಪಾಲ್ ಕಾಲೇಜ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸಸ್,<br>ಮಣಿಪಾಲ್ 576104, | ಜೀವ ವಿಜ್ಞಾನ |  |
| **ಡಾ. ಸುದೀಶ ಜೋಗಯ್ಯ**<br>ಸಹಾಯಕ ಪ್ರಾಧ್ಯಾಪಕ ಮತ್ತು<br>ಕಾರ್ಯಕ್ರಮ ಸಂಯೋಜಕರು<br>ಸಸ್ಯ ಆರೋಗ್ಯ ಮತ್ತು ರೋಗನಿರ್ಣಯ ಪ್ರಯೋಗಾಲಯ<br>ಬಯೋಟೆಕ್ನಾಲಜಿ ಮತ್ತು ಮೈಕ್ರೋಬಯಾಲಜಿ<br>ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ,<br>ಧಾರವಾಡ - 580 003 | ಕೃಷಿ ವಿಜ್ಞಾನ ಮತ್ತು ಪಶುಸಂಗೋಪನೆ |  |

## ಪ್ರೊ. ಸತೀಶ್ ಧವನ್ ಯುವ ಇಂಜಿನಿಯರ್ ರಾಜ್ಯ ಪ್ರಶಸ್ತಿ 2021

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಪ್ರೊ. ಸುಭಾಶ್ ಚಂದ್ರ ಕಟ್ಟಿಮನಿ**<br>ಅಸೋಸಿಯೇಟ್ ಪ್ರೊಫೆಸರ್, #M003,<br>ಮೆಕ್ಯಾನಿಕಲ್ ಇಂಜಿನಿಯರ್ ವಿಭಾಗ,<br>ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (NITK)<br>ಶ್ರೀನಿವಾಸನಗರ ಪೋಸ್ಟ್, ಸೂರತ್ಕಲ್<br>ಕರ್ನಾಟಕ -575025. | ಇಂಜಿನಿಯರಿಂಗ್ ಸೈನ್ಸಸ್ |  |
| **ಪ್ರೊ. ಸುಪ್ರದೀಪ ವಿ ಆರ್**<br>ಅಸೋಸಿಯೇಟ್ ಪ್ರೊಫೆಸರ್,<br>TF-38, ನ್ಯಾನೋ ವಿಜ್ಞಾನ ಮತ್ತು ಇಂಜಿನಿಯರಿಂಗ್<br>ಕೇಂದ್ರ, ಭಾರತೀಯ ವಿಜ್ಞಾನ ಸಂಸ್ಥೆ,<br>ಬೆಂಗಳೂರು - 560 012. | ಇಂಜಿನಿಯರಿಂಗ್ ಸೈನ್ಸಸ್ |  |
| **ಪ್ರೊ. ಸೂರ್ಯಸಾರಥಿ ಬೋಸ್**<br>ಅಸೋಸಿಯೇಟ್ ಪ್ರೊಫೆಸರ್,<br>ಮೆಟೀರಿಯಲ್ಸ್ ಇಂಜಿನಿಯರಿಂಗ್ ವಿಭಾಗ,<br>ಭಾರತೀಯ ವಿಜ್ಞಾನ ಸಂಸ್ಥೆ,<br>ಬೆಂಗಳೂರು 560012 | ಇಂಜಿನಿಯರಿಂಗ್ ಸೈನ್ಸಸ್ |  |
| **ಡಾ. ಎಸ್. ಟಿ. ಅರುಣಾ**<br>ಹಿರಿಯ ಪ್ರಧಾನ ವಿಜ್ಞಾನಿ,<br>ಸರ್ಫೇಸ್ ಎಂಜಿನಿಯರಿಂಗ್ ವಿಭಾಗ,<br>CSIR - ನ್ಯಾಷನಲ್ ಏರೋಸ್ಪೇಸ್ ಲ್ಯಾಬೋರೇಟರೀಸ್<br>(NAL),<br>ಬೆಂಗಳೂರು-560017 | ಇಂಜಿನಿಯರಿಂಗ್ ಸೈನ್ಸಸ್ |  |

## ಡಾ. ಕಲ್ಪನಾ ಚಾವ್ಲಾ ಮಹಿಳಾ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ 2021

| ಪ್ರಶಸ್ತಿ ಪುರಸ್ಕೃತರ ಹೆಸರು ಮತ್ತು ವಿಳಾಸ | ಕ್ಷೇತ್ರ | |
|---|---|---|
| **ಪ್ರೊ. ಉಮಾ ರಾಮಕೃಷ್ಣನ್**<br>ಪ್ರಾಧ್ಯಾಪಕರು<br>ಜೈವಿಕ ವಿಜ್ಞಾನ ರಾಷ್ಟ್ರೀಯ ಕೇಂದ್ರ, TIFR, NCBS,<br>GKVK ಕ್ಯಾಂಪಸ್, ಬಳ್ಳಾರಿ ರಸ್ತೆ,<br>ಬೆಂಗಳೂರು 560065 | ವಿಜ್ಞಾನ ಮತ್ತು ತಂತ್ರಜ್ಞಾನ |  |